ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಹೆಚ್.ಡಿ.ಎಲ್ ವಕೀಲರಿಂದಃ

ನನಗೆ ವಿದ್ಯಾಭ್ಯಾಸವಿಲ್ಲ. ವಾದಿಯರು ಪ್ರತಿವಾದಿಯರ ವಿರುದ್ಧ ಯಾವ ಉದ್ದೇಶಕ್ಕೆ ಈ ದಾವೆ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಯಾವ ಸ್ವತ್ತಿನ ಮೇಲೆ ಈ ದಾವೆ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯುವ ಮೊದಲು ವಾದಿಯರು ಮತ್ತು ಪ್ರತಿವಾದಿಯರು ಏನು ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ.

ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬರುವ ಮೊದಲು ದಾವಾ ಸ್ವತ್ತಿನ ಸರ್ವೇ ಮಾಡಿ ಆ ಜಮೀನು ಈ ರೀತಿ ಇದೆ ಎಂದು ನನಗೆ ಮಾಹಿತಿ ಕೊಟ್ಟಿರಲಿಲ್ಲ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಕೊಟ್ಟಿರುವುದು ಉಂಟು, ತೆಗೆದುಕೊಂಡಿರುವುದು ಉಂಟು ಎಂದು ನುಡಿಯುತ್ತಾರೆ. ದಾವಾ ಸ್ವತ್ತು 1ನೇ ಪ್ರತಿವಾದಿಗೆ ಹೇಗೆ ಬಂತು ಎಂದು ನನಗ ಗೊುತ್ತಿಲ್ಲ, ಸಾಕ್ಷಿಯು ಮುಂದುವರೆದು ತಿಮ್ಮಯ್ಯನವರ ತಂದೆ ಮಾಯಗಣ್ಣ ಸದರಿ ಜಮೀನಿನ ಸ್ವಾಧೀನಾನುಭವದಲ್ಲಿದ್ದು ಅವರ ಮರಣಾ ನಂತರ ತಿಮ್ಮಯ್ಯನವರು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ನಂತರ ಅದನ್ನು ಗೋಪಾಲರವರಿಗೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಗೋಪಾಲರವರು ಜಮೀನು ಮಾರಾಟವಾದ ವಿಚಾರ ನನಗೆ ಹೇಳಿದ ಕಾರಣ ನನಗೆ ವಿಷಯ ತಿಳಿಯಿತು ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾನು ಪಕ್ಕದ ಜಮೀನಿನವನು ಎಂದು ನುಡಿಯುತ್ತಾರೆ. 1 ಮತ್ತು 2 ಹಾಗೂ 3ನೇ

ದಿನಾಂಕ : 02.03.2021 ಓ.ಎಸ್ ನಂ.608/2013 ರಲ್ಲಿ
ಡಿ.ಡಬ್ಲ್ಯೂ-3(ಧರ್ಮಯ್ಯ)

ಪ್ರತಿವಾದಿಗಳ ನಡುವೆ ಆಸ್ತಿ ಮಾರಾಟದ ಬಗ್ಗೆ ನಡೆದ ಮಾತುಕತೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಕ್ರಯಪತ್ರ ಯಾವಾಗ ಮತ್ತು ಎಷ್ಟು ವಿಸ್ತೀರ್ಣದ ಸ್ವತ್ತಿಗೆ ನೋಂದಣಿಯಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಯ ತಂದೆ ಮಾಯಗಣ್ಣ ಮೂಲತಃ ವ್ಯವಸಾಯಗಾರರು ಎಂದರೆ ಸರಿ. ಮಾಯಗಣ್ಣನವರಿಗೆ ಹೊನ್ನಣ್ಣ ಎಂಬ ತಮ್ಮ ಇದ್ದಾರೆ. ಮಾಯಗಣ್ಣನವರ ತಂದೆಯ ಹೆಸರು ಕೆಂಚೇಗೌಡ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದ ಶಿವಣ್ಣನವರ ತಂದೆ ಮಾಯಿಗೇಗೌಡ ಎಂದರೆ ಸರಿ, ಸಾಕ್ಷಿಯು ಸ್ವತಃ ಲೈನ್ ಮಾಯಿಗೇಗೌಡ ಎಂದು ನುಡಿಯುತ್ತಾರೆ. ಮಾಯಿಗೇಗೌಡ ಕೆ.ಇ.ಬಿ ಯಲ್ಲಿ ಲೈನ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಮಾಯಿಗೇಗೌಡ ಎಂಬ ಹೆಸರಿನ ಬಹಳ ವ್ಯಕ್ತಿಗಳಿದ್ದ ಕಾರಣ ಗುರುತಿಸುವ ಸಲುವಾಗಿ ಎಲೆಕ್ಟ್ರಿಕಲ್ ಮಾಯಿಗೇಗೌಡ ಹಾಗೂ ಲೈನ್ ಮಾಯಿಗೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯು ಇಬ್ಬರೇ ಇದ್ದರು ಎಂದು ನುಡಿಯುತ್ತಾರೆ. ಅವರ ಪೈಕಿ ಶಿವಣ್ಣನವರ ತಂದೆಯನ್ನು ಲೈನ್ ಮಾಯಿಗೇಗೌಡ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

ಲೈನ್ ಮಾಯಿಗೇಗೌಡರವರ ತಂದೆಯ ಹೆಸರು ಕಾಳೇಗೌಡ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಬಸವೇಗೌಡ ಬಿನ್ ನಂಜೇಗೌಡ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವೇಗೌಡ ತಮ್ಮ 5 ಎಕರೆ ಜಮೀನನ್ನು ಎಲೆಕ್ಟ್ರಿಕಲ್ ಮಾಯಿಗೇಗೌಡರವರಿಗೆ ಮಾರಾಟ

ದಿನಾಂಕ : 02.03.2021 ಓ.ಎಸ್ ನಂ.608/2013 ರಲ್ಲಿ
ಡಿ.ಡಬ್ಲ್ಯೂ-3(ಧರ್ಮಯ್ಯ)

ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಜಮೀನನ್ನು 3 ನೇ ಪ್ರತಿವಾದಿಗೆ ಕಲ್ಲು ಗಣಿಗಾರಿಕೆ ಮಾಡಲು ಕ್ರಯಕ್ಕೆ ಕೊಟ್ಟಿದ್ದೆ ಎಂದರೆ ಸರಿ. ಗಣಿಗಾರಿಕೆ ನಡೆಯುವಾಗ 3 ನೇ ಪ್ರತಿವಾದಿ ನನಗೆ ವರ್ಷಕ್ಕೆ ಇಂತಿಷ್ಟು ವಂತಿಗೆ ಕೊಡುತ್ತಿದ್ದರು ಎಂದರೆ ಸರಿ. ಕಾರಣ ನಾನು 3 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರಮಾಣಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ತಿಮ್ಮಯ್ಯನವರು ಸ್ವಾಧೀನದಲ್ಲಿದ್ದು, ಗೋಪಾಲರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ತಯಾರಿಸಿದ ಪ್ರಮಾಣಪತ್ರಕ್ಕೆ ನಾನು ಸಹಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಬರೆದ ಪೂರ್ತಿ ವಿಚಾರ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಸ್ವತ್ತನ್ನು ಎಲೆಕ್ಟ್ರಿಕಲ್ ಮಾಯಿಗೇಗೌಡ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಜೀವಿತ ಕಾಲದಲ್ಲಿ ಅವರೇ ಸ್ವಾಧೀನದಲ್ಲಿದ್ದು ಅವರ ಮರಣಾ ನಂತರ ಅವರ ಹೆಂಡತಿ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ : ಇಲ್ಲ

ದಿನಾಂಕ ಃ 02.03.2021 ಓ.ಎಸ್ ನಂ.608/2013 ರಲ್ಲಿ

ಡಿ.ಡಬ್ಲ್ಯೂ-3(ಧರ್ಮಯ್ಯ)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.